# ಲಿಂಗೈಕ್ಯ ಶ್ರೀ ಜಯವಿಭವ ಮುರುಘರಾಜೇಂದ್ರ ಸ್ವಾಮಿಗಳವರ ಸ್ಮರಣೆ ಸುದ್ದಿ

**ಚಿತ್ರದುರ್ಗ, ಮೇ 21** - ನಗರದ ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠದಲ್ಲಿ ಇಂದು ಲಿಂಗೈಕ್ಯ ಶ್ರೀ ಜಗದ್ಗುರು ಜಯವಿಭವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಸ್ಮರಣೆ ಕಾಯಕ್ರಮ ನಡೆಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಶಿವಮೂರ್ತಿ ಮುರುಘಾ ಶರಣರು ಮಾತನಾಡಿ, ಜಯದೇವ ಶ್ರೀಗಳು ಲಿಂಗೈಕ್ಯರಾದ ನಂತರ ಜಯವಿಭವ ಸ್ವಾಮಿಗಳು ಪೀಠಾಧ್ಯಕ್ಷರಾಗಿ ಆಯ್ಕೆಯಾದರು. ಇವರ ಪೂರ್ವಾಶ್ರಮದ ಹೆಸರು ಶಿವಲಿಂಗದೇವರು. ಮೊದಲು ಅಥಣಿ ಗಚ್ಚಿನಮಠದಲ್ಲಿ ಮುರುಘೇಂದ್ರ ಶ್ರೀಗಳ ಕಾರುಣ್ಯದ ಜೊತೆ ಕಾರ್ಯಾರಂಭ ಮಾಡಿದರು. ಮುಳಗುಂದದ ಬಾಲಲೀಲ ಶ್ರೀಗಳವರ ಮತ್ತು ಮುರುಘೇಂದ್ರ ಶಿವಯೋಗಿಗಳವರ ಆಶೀರ್ವಾದ ಇದ್ದುದನ್ನು ನೋಡಿದ ಜಯದೇವ ಶ್ರೀಗಳು ಶಿವಲಿಂಗ ದೇವರನ್ನು ಹೆಚ್ಚಿನ ವಿದ್ಯಾಭ್ಯಾಸಕ್ಕೆ ಕಾಶಿಗೆ ಕಳುಹಿಸುತ್ತಾರೆ. ಇವರ ಜೊತೆ ಮಲ್ಲಿಕಾರ್ಜುನ ಜಗದ್ಗುರುಗಳು ಸಹ ಕಾಶಿಪೀಠದಲ್ಲಿ ಜೊತೆಯಾಗಿ ಇಬ್ಬರು ಒಂದೇ ಕೊಠಡಿಯಲ್ಲಿ ಇದ್ದು ವಿದ್ಯಾಭ್ಯಾಸ ಮಾಡಿದ್ದರು. ಜಯವಿಭವ ಶ್ರೀಗಳಲ್ಲಿ ಕೃಷಿ ಆಸಕ್ತಿ ಮಾತ್ರವಲ್ಲ ಪಾಕಪ್ರವೀಣರಾಗಿದ್ದರು. ಪೀಠಾಧೀಶರಾದ ಮೇಲೆ ಪಶುಪಾಲನೆಗೆ ಹೆಚ್ಚಿನ ಆದ್ಯತೆ ನೀಡಿದರು. ಯಾವ ಮಠವು ಗೋಶಾಲೆ ಮಾಡದ ಸಂದರ್ಭದಲ್ಲಿ ಜಯವಿಭವ ಸ್ವಾಮಿಗಳು ಮಾಡಿದ್ದರು. ಸಾವಿರಾರು ದನಕರುಗಳು ಇದ್ದವು. ಮಠದೊಳಗೆ ಇರುವ ತೆಂಗಿನ ಮರಗಳು ಸಹ ಅವರೇ ಹಾಕಿದ್ದು. ಸಾಧನೆ ಮಾಡಿದವರು ಲಿಂಗೈಕ್ಯರಾಗಬಹುದು ಆದರೆ ಅವರ ಸಾಧನೆಗೆ ಸಾವಿರುವುದಿಲ್ಲ. ದವಳಿ ಹೊಂಡದ ತೋಟವು ಸಹ ಅವರೇ ಹಾಕಿ ಬೆಳೆಸಿದ್ದು.

ಜಯದೇವ ಶ್ರೀಗಳು ಹಾಗು ಜಯವಿಭವ ಶ್ರೀಗಳ ಮಧ್ಯೆ ಹಾರ್ದಿಕವಾದ ಸ್ಪರ್ಧೆ ಇತ್ತು. ಸಾತ್ವಿಕರು, ಸಂಪನ್ನರು. ಬಹಳ ಕಾಲ ಪೀಠಾಧ್ಯಕ್ಷರಾಗಿರಲಿಲ್ಲ. ಅನಾರೋಗ್ಯದಿಂದ ಅಲ್ಪಕಾಲದಲ್ಲಿಯೇ ಲಿಂಗೈಕ್ಯರಾದರು. ಕಡಿಮೆ ಅವಧಿಯಲ್ಲಿ ಶ್ರೀಮಠದ ಶ್ರೇಯೋಭಿವೃದ್ಧಿಗೆ ಶ್ರಮಿಸಿದವರು. ಇಂದು ಹಣ ಸಂಪಾದನೆಗಿಂತ ಪ್ರಾಣ ಸಂಪಾದನೆ ಮುಖ್ಯ. ನಮ್ಮ ಜೀವವನ್ನು ನಾವೇ ಉಳಿಸಿಕೊಳ್ಳಬೇಕಿದೆ ಎಂದು ಹೇಳಿದರು.

ಕೆಇಬಿ ಷಣ್ಮುಖಪ್ಪ ಸ್ವಾಗತಿಸಿ ಪ್ರಾಸ್ತಾವಿಕವಾಗಿ ಮಾತನಾಡಿದ ಅವರು, 1956 ರಿಂದ 65ರವರೆಗೆ ಶ್ರೀಮಠದ ಪೀಠಾಧ್ಯಕ್ಷರಾಗಿದ್ದ ಜಯವಿಭವ ಶ್ರೀಗಳಿಗೆ ಕೃಷಿಯ ಬಗ್ಗೆ ಅಪಾರ ಪ್ರೀತಿ. 1962ರಲ್ಲಿ ಚೀನಾ ಯುದ್ಧವಾದಾಗ ನಿಜಲಿಂಗಪ್ಪ ಮುಖ್ಯಮಂತ್ರಿಗಳಾಗಿದ್ದರು. ಆ ಸಂದರ್ಭದಲ್ಲಿ ಜನರಿಗೆ ಸಹಾಯ ಮಾಡಲೆಂದು ಪರಂಪರಾಗತರಾಗಿ ಬಂದಿದ್ದಂತಹ ಕಿರೀಟವನ್ನು ಭಾರತ ಸರ್ಕಾರಕ್ಕೆ ಕೊಟ್ಟ ಉದಾರಿಗಳು ಎಂದು ಸ್ಮರಿಸಿದರು.

ಪಟೇಲ್ ಶಿವಕುಮಾರ್, ಎಂ.ಟಿ. ಮಲ್ಲಿಕಾರ್ಜುನಸ್ವಾಮಿ, ಮಹಡಿ ಶಿವಮೂರ್ತಿ ವೇದಿಕೆಯಲ್ಲಿದ್ದರು. ಎಸ್.ಜೆ.ಎಂ. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ ಇದ್ದರು. ಉಮೇಶ ಪತ್ತಾರ ಪ್ರಾರ್ಥಿಸಿದರು. ಕೆ.ಎಂ. ವೀರೇಶ್ ವಂದಿಸಿದರು. ವೀರೇಂದ್ರಕುಮಾರ್ ನಿರೂಪಿಸಿದರು.








ಬಸವಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಚಿತ್ರದುರ್ಗ
ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಜಯವಿಭವ ಮುರುಘರಾಜೇಂದ್ರ
ಮಹಾಸ್ವಾಮಿಗಳವರ ಸ್ಮರಣೆ


ಶ್ರೀಗುರುಬಸವಲಿಂಗಾಯನಮಃ
ಬಸವಕೇಂದ್ರ, ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠ
ಚಿತ್ರದುರ್ಗ
ಶ್ರೀಮನ್ಮಹಾರಾಜ ನಿರಂಜನ ಜಗದ್ಗುರು
ಶ್ರೀ ಜಯವಿಭವ ಮುರುಘರಾಜೇಂದ್ರ
ಮಹಾಸ್ವಾಮಿಗಳವರ ಸ್ಮರಣೆ
ದಿವ್ಯ ಸಾನಿಧ್ಯ :
ದಿನಾಂಕ : 21-05-2021ನೇ ಶುಕ್ರವಾರ
12.00 ಗಂಟೆಗೆ
ಸ್ಥಳ : ಅಲ್ಲಮಪ್ರಭು ಸಂಶೋಧನಾ ಕೇಂದ್ರ